# ಮಹಿಳಾ ಕಾದಂಬರಿ: ದಿಟ್ಟ ಮಹಿಳಾ ಪಾತ್ರಗಳ ವಿಶ್ಲೇಷಣೆ

**ಪುಷ್ಪಲತ.ಕೆ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು
kpushpalatha.024@gmail.com

ಕನ್ನಡ ಸಾಹಿತ್ಯ ಲೋಕವು ವಿಭಿನ್ನತೆಯ ಆಗರ. ಇಲ್ಲಿ ನಾನಾ ಸಾಹಿತ್ಯದ ಕವಲುಗಳಾದ ಕಥೆ, ಕಾದಂಬರಿ, ನಾಟಕ, ಕವನ, ಲಲಿತ ಪ್ರಬಂಧವೆಂಬ ಹಲವು ಮಾದರಿಗಳಿವೆ. ಈ ಮಾದರಿಗಳೂ ಕೂಡ ತಮ್ಮದೇ ಆದ ಹಲವು ಪರ್ಯಾಯ ಅಂಶಗಳನ್ನು ಒಳಗೊಂಡು ಭಿನ್ನತೆಯನ್ನು ಮೆರೆದಿದೆ. ಅವುಗಳಲ್ಲಿ ಕಾದಂಬರಿ ಪ್ರಕಾರವೆಂಬುದು ಪ್ರಮುಖ ಮಜಲು. 'ಮಹಾಕಾವ್ಯದ ಕೇಂದ್ರ ವಸ್ತು ದಂತಕಥೆಯಾಗಿ ಹೋದ ನಿನ್ನೆಯಾದರೆ ಕಾದಂಬರಿಯ ವಸ್ತು ವರ್ತಮಾನವೆಂದು ಗುರುತಿಸ್ಪಡುವ ಇವತ್ತು. ಮಹಾಕಾವ್ಯದ್ದು ಕಥೆ ಹೇಳುವ ಶೈಲಿಯಾದರೆ, ಕಾದಂಬರಿಯದು ವರ್ಣನೆ' ಎಂದು ಕಾದಂಬರಿಯನ್ನು ಕುರಿತು 'ಗ್ಯಾನೆ' ಹೇಳುತ್ತಾರೆ. ಗಾತ್ರದಲ್ಲಿ ಸಣ್ಣಕಥೆಗಿಂತಲೂ ದೊಡ್ಡದಾಗಿರುವ ಕಾದಂಬರಿಯು ವಾಸ್ತವಕ್ಕೆ ಹೆಚ್ಚು ಒತ್ತು ನೀಡುವಂತ್ತದ್ದಾಗಿದ್ದು, ಓದುಗರಿಗೂ ಕೂಡ ಮೆಚ್ಚಿನ ಪ್ರಕಾರವೆಂಬುದು ಸುಳ್ಳಲ್ಲ. ಅದರಲ್ಲೂ ಮಹಿಳಾ ಕಾದಂಬರಿ ಎಂಬುದು ರಚನೆಯಲ್ಲಿ ತನ್ನದೇ ಆದ ವೈವಿಧ್ಯತೆಯನ್ನು ಒಳಗೊಂಡಿದೆ. ಮಹಿಳಾ ಸಾಹಿತ್ಯವನ್ನು ಆರಂಭದಲ್ಲಿ ಒಂದು ಬಗೆಯ ಉಪೇಕ್ಷೆಗೆ ಒಳಪಡಿಸಲಾಗಿತ್ತು. ಆದರೆ ಕಾಲಾನಂತರದಲ್ಲಿ ಆದ ಬದಲಾವಣೆಗಳಿಂದ ಈ ಪ್ರಕಾರವು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನ ಛಾಪನ್ನು ಮೂಡಿಸಿ ಅಗಾಧತೆಯನ್ನು ಮೆರೆದಿರುವುದು ಕಣ್ಮುಂದಿದೆ. ಸಮಯ ಕಳೆಯಲು ಎಂಬಂತೆ ಓದುಗ ವಲಯಕ್ಕೆ ಹತ್ತಿರವಾದ ಈ ಮಹಿಳಾ ಕಾದಂಬರಿಯ ಪ್ರಪಂಚ ನಂತರದಲ್ಲಿ ಹಲವು ಗಂಭೀರ ವಿಷಯಗಳ ಕುರಿತು ಬೆಳಕು ಹರಿಸಿ ಸಹೃದಯರಿಗೆ ಇನ್ನೂ ಹತ್ತಿರವಾಯಿತು. ಇಂತಹ ಮಹಿಳಾ ಕಾದಂಬರಿಗಳು ಕಥಾ ವಿನ್ಯಾಸ, ನಿರೂಪಣೆ, ಭಾಷಾ ಪ್ರಯೋಗದೊಂದಿಗೆ ಪಾತ್ರಗಳ ಸೃಷ್ಟೀಕರಣ ಹಾಗೂ ಆ ಪಾತ್ರಗಳ ಮೂಲಕವೇ ಓದುಗರ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಲೇಖಕಿಯರು ಸಮಾಜದ ಕುರಿತಾದ ತಮ್ಮ ಅಭಿಪ್ರಾಯವನ್ನು ಹಾಗೂ ಸಮಾಜದಲ್ಲಿ ಮಹಿಳೆಯ ವಿಷಯವಾಗಿ ಆಗಬೇಕಾದ ಬದಲಾವಣೆಯ ಪಥವನ್ನು ತಮ್ಮ ಕೃತಿಯಲ್ಲಿ ಕೆಲವು ಪಾತ್ರಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಆ ಪಾತ್ರಗಳು ಇಡೀ ಕೃತಿಯ ಜೀವಾಳವಾಗಿರುತ್ತವೆ ಎಂದರೂ ತಪ್ಪಲ್ಲ. ಅಂತಹ ಕೆಲವು ಪಾತ್ರಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಎಂ ಕೆ ಇಂದಿರಾ ಅವರ ಕಾದಂಬರಿಯಾದ 'ಫಣಿಯಮ್ಮ'ದ 'ದಾಕ್ಷಾಯಣಿ', ಮಂಗಳ ಸಿ ಅವರ 'ಕೃಷ್ಣಮುದ್ರಿಕೆ'ಯ 'ನಾಗಮ್ಮ', ಗೀತಾ ನಾಗಭೂಷಣರ

'ಸವಾಲು' ಕಾದಂಬರಿಯ 'ರತ್ನ', ವಸುಮತಿ ಉಡುಪ ಅವರ ಕಾದಂಬರಿಯಾದ 'ಮನ್ವಂತರ'ದ 'ಕಾವೇರಿ'ಯರು ಈ ಲೇಖನದ ಮುಖ್ಯಭೂಮಿಕೆಯಲ್ಲಿದ್ದಾರೆ.

ಸಂಪ್ರದಾಯದ ಹೆಸರಲ್ಲಿ ಗಂಡ ಸತ್ತ ನಂತರ ಹೆಂಡತಿಯನ್ನು ಚಿತೆಗೇರಿಸುತ್ತಿದ್ದ ನಮ್ಮ ಸಮಾಜದಲ್ಲಿ ನಡೆದ ಕೆಲವು ಪ್ರಗತಿಪರ ಹೋರಾಟಗಳಿಂದಾಗಿ 1829ರಲ್ಲಿ ಸತಿಪದ್ಧತಿ ಎಂಬುದು ನಿಷೇಧಗೊಂಡರೂ ಅದರ ಪಳೆಯುಳಿಕೆ ಎಂಬಂತೆ 'ಮಡಿ'ಯಾಗುವ ನಿಯಮ ಉಳಿದುಕೊಂಡಿತು. ಇದನ್ನೇ ಮುಖ್ಯವಾಗಿರಿಸಿಕೊಂಡು ಪೀಳಿಗೆಯ ಅಂತರದಲ್ಲಿ ಆದ ಮಾರ್ಪಾಡು ಮತ್ತು ಆಗ ಹೆಣ್ಣು ಎದುರಿಸಿದ ಸವಾಲುಗಳನ್ನು ಎರಡು ಪಾತ್ರಗಳ ಮೂಲಕ ಲೇಖಕಿ ತಮ್ಮ ಕಾದಂಬರಿಯಾದ 'ಫಣಿಯಮ್ಮ'ದಲ್ಲಿ ವಿಶದಪಡಿಸಿದ್ದಾರೆ. ಅಪ್ಪಟ ಸಂಪ್ರದಾಯವಾದಿಗಳಿದ್ದ ಕಾಲವನ್ನೇ ಪ್ರಮುಖವಾಗಿರಿಸಿಕೊಂಡ ಈ ಕಾದಂಬರಿಯೂ ಅಂದಿನ ಜನರ ಸ್ಥಿತಿಗತಿ, ಜೀವನ ಕ್ರಮದ ಜೊತೆಗೆ ಅಂದಿನ ಕಾಲಘಟ್ಟದಲ್ಲಿದ್ದ ಅಂಧನಂಬಿಕೆ ಹೀಗೆ ಸಮಾಜಕ್ಕೆ ಪಿಡುಗಾಗಿದ್ದ ಹಲವು ಅಂಶಗಳನ್ನು ಮುಂದಿಟ್ಟುಕೊಂಡು ಅವುಗಳನ್ನು ಕುರುಡಾಗಿ ನಂಬಿ ಬದುಕನ್ನು ಸವೆಸಿದ ಫಣಿಯಮ್ಮಳ ಆತ್ಮವೃತ್ತಾಂತವನ್ನು ವಿವರಿಸಿದೆ. ಫಣಿಯಮ್ಮಳೇ ಇದರ ಕೇಂದ್ರಬಿಂದುವಾದರೂ ಆಕೆಗೆ ಎಂದೂ ಎದುರಾಗದ ಜೀವನವಾದ ಗಂಡು ಹೆಣ್ಣಿನ ಸಂಬಂಧದ ಸಂಕೀರ್ಣತೆಯ ಪ್ರಯೋಗವು ಮನುಷ್ಯ ಸಮಾಜದಲ್ಲಿ ಉಂಟು ಮಾಡಿದ ಬದಲಾವಣೆಗಳನ್ನು ಈ ಕಾದಂಬರಿಯು ಧ್ವನಿಸುತ್ತದೆ. ಇಲ್ಲಿ ಫಣಿಯಮ್ಮನಷ್ಟೇ ಪ್ರಮುಖವಾದ ಮತ್ತೊಂದು ಪಾತ್ರವೆಂದರೆ ದಾಕ್ಷಾಯಣಿ. 'ಮಡಿ' ಎಂಬ ಹೆಸರಿನಲ್ಲಿ ಬಂದಂತಹ ಅನಿಷ್ಟ ಪದ್ಧತಿಗೆ ಒಳಗಾಗಿಯೂ ಅದನ್ನು ಎದುರಿಸಿ ತನ್ನ ಬದುಕನ್ನು ಬದಲಿಸಿಕೊಂಡ ದಾಕ್ಷಾಯಣಿಯು ಲೇಖಕಿಯ ಬಂಡಾಯದ ಧ್ವನಿಯಾಗಿ ಕಾಣಿಸಿಕೊಂಡಿದ್ದಾಳೆ.

'ನಾನಂತೂ ಮಡಿ ಮಾಡಿಸ್ಕಳ್ಳೂದಿಲ್ಲ, ಹಾಂಗೆ ಬಲವಂತ ಮಾಡಿ ಮಾಡಿದ್ರೂ ನಾನು ಅವರ ಮನಿಗೆ ಹೋಗುದಿಲ್ಲ ಗಂಡಿಲ್ಲದ ಮ್ಯಾಲೆ ನಂಗೇನ್ಕೆಲಸ? ಅವರ ಮನೇಲಿ ಅವರ ಚಾಕ್ರಿ ಬಡಿಯೂದಕನು ನಾನು ಹುಟ್ಟಿರೂದು? ನಾ ಇಲ್ಲೇ ಇರ್ತನಿ'[1] ಎಂದು 'ಮಡಿ' ಮಾಡಿಸಿಕೊಳ್ಳಲು ಪ್ರತಿರೋಧವನ್ನು ವ್ಯಕ್ತಪಡಿಸುವ ದಾಕ್ಷಾಯಣಿಯ ಮಾತಿಗೆ ಕಿಮ್ಮತ್ತು ಕೊಡದೇ ಅವಳನ್ನು ವ್ಯವಸ್ಥೆಯ ಬಲೆಯಲ್ಲಿ ಹಿಡಿದ ಜನರಿಗೆ ಉತ್ತರವೆಂಬಂತೆ ಅವಳ ಸತ್ತ ಗಂಡನ ತಮ್ಮನಿಂದಲೇ ಗರ್ಭಿಣಿಯಾಗುತ್ತಾಳೆ. ಇದು ಸಮಾಜದಲ್ಲಿ ಗಂಡಿಗಿರುವಷ್ಟೇ ಹೆಣ್ಣಿಗೂ ಬದುಕುವ ಹಕ್ಕಿದೆ ಎಂಬುದನ್ನು ಆಕೆ ಗೊಡ್ಡು ಸಂಪ್ರದಾಯವಾದಿಗಳಿಗೆ ಸಾರಿ ಹೇಳಿದಂತಿದೆ.

[1] ಫಣಿಯಮ್ಮ, ಎಂ ಕೆ ಇಂದಿರಾ, ಇಂದಿರಾ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ – 68

'ನಿಮ್ಮ ಮಗನೇ ಬಸಿರು ತುಂಬಿದವರು. ನಾ ಯಾಕೆ ತೌರಿಗೆ ಹೋಗ್ಲಿ? ನೀವೆ ಬಾಣಂತನ ಮಾಡಿ, ಆ ಮಗನಿಗೆ ಬದ್ಲಿಗೆ ಈ ಮಗ ಅಷ್ಟೇ ಸೈಯಲ್ಲ'

'ನಿನಗೆ ಬಹಿಷ್ಕಾರ ಹಾಕಿಸ್ತೀವಿ' ಎಂದು ಕೆಲವು ಮುದುಕರು ಪಂಚೆ ಕಟ್ಟಿ ಶೃಂಗೇರಿಗೆ ಹೊರಟರು. ಅವಳು ಜಗ್ಗಲಿಲ್ಲ.

'ನಡೀರಿ ನಾನೂ ಬರ್ತನಿ, ಸ್ವಾಮಿಗಳ ಎದುರಿಗೆ ನೀವು ಮಾಡಿದ್ದೇಲ್ಲಾ ಹೇಳ್ತನಿ. ಅದು ಹ್ಯಾಂಗ ಬಹಿಷ್ಕಾರ ಹಾಕ್ತಾರೋ ನಾನು ನೋಡ್ತನಿ. ಕಡೀಗೂ ಬಹಿಷ್ಕಾರ ಹಾಕಿದ್ರೆ ನಿಮ್ಮನೆಲ್ಲ ಮನಿಯಿಂದ ಅಟ್ಟಿ ನಾನೊಬ್ಬೇ ಇರ್ತನಿ ಏನಾಡ್ತೀರ? ಇನ್ನೂ ನೀವು ಮಿತಿ ಮೀರಿದ್ರೆ ಹೊಲೆರ್ನೆಲ್ಲ ಮನೆ ಒಳಗೆ ಕರಕಂಡು ಬರ್ತನಿ, ಗೊತ್ತಾ?'[2] ಎಂದು ಹೇಳುವ ಅವಳ ಇಷ್ಟೂ ಮಾತುಗಳು ತನ್ನ ಬದುಕಿನ ಅಸ್ತಿತ್ವಕ್ಕಾಗಿ ಮಾಡಿದ ಹೋರಾಟವೆಂಬುದು ಸ್ಪಷ್ಟ. ಗಂಡ ಸತ್ತನೆಂಬ ಕಾರಣಕ್ಕೆ ಬದುಕನ್ನು ಕಳೆದುಕೊಳ್ಳ ಬಯಸದೆ ಸಮಾಜದ ವಿರೋಧವಿದ್ದರೂ ಮತ್ತೊಂದು ಜೀವನವನ್ನು ಕಟ್ಟಿಕೊಳ್ಳಬೇಕೆಂದು ಬಯಸುವ ಮಹಿಳಾ ಸಮಾಜದ ಪ್ರತಿನಿಧಿಯಾಗಿ ದಾಕ್ಷಾಯಣಿ ಇಲ್ಲಿ ಕಾಣಿಸುತ್ತಾಳೆ. ಸಮಾಜಕ್ಕೆ ಹೆದರಿ ಮೌನ ಪ್ರತಿರೋಧಕ್ಕೆ ಒಳಗಾಗದೆ ಜನರನ್ನು ಎದುರಿಸಿ ತನ್ನ ಹೋರಾಟವನ್ನು ಮಾಡುವ ಮೂಲಕ ಆಧುನಿಕತೆಯತ್ತ ಮುಖ ಮಾಡಿ ಭಿನ್ನ ವ್ಯಕ್ತಿತ್ವವಾಗಿ ನಿಲ್ಲುತ್ತಾಳೆ.

ಜನಾಂಗವೊಂದರ ಸಮಗ್ರ ವಿವರಗಳನ್ನು ಮನ ಮುಟ್ಟವಂತೆ ಓದುಗರಿಗೆ ತಲುಪಿಸಿರುವ ಕಾದಂಬರಿ ಮಂಗಳ ಸಿ ಅವರ 'ಕೃಷ್ಣಮುದ್ರಿಕೆ'. ಗೊಲ್ಲ ಸಮುದಾಯದ ಆರಂಭಿಕ ಹಂತದಿಂದ ಪ್ರಾರಂಭಿಸಿ ಆಧುನಿಕತೆಯ ಆಗಮನದಿಂದ ಅದರಲ್ಲಿ ಆದ ಬದಲಾವಣೆಗಳನ್ನು ಲೇಖಕಿ ಇಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಗೊಲ್ಲರ ಜೀವನದ ಆಗು ಹೋಗು, ಸಂಪ್ರದಾಯ, ಸಂಸ್ಕೃತಿ, ನೋವು, ಆ ಸಮುದಾಯದ ಹೆಣ್ಣಿನ ಪರಿಸ್ಥಿತಿ, ಅಲ್ಲಿ ಅವಳ ಸ್ಥಾನಮಾನ ಹೀಗೆ ಹಲವು ವಿಷಯಗಳ ಮೇಲೆ ಲೇಖಕಿ ತಮ್ಮ ಜ್ಞಾನದ ಹರವನ್ನು ಹರಡಿದ್ದಾರೆ. ಕಾದಂಬರಿಯ ಮುಖ್ಯ ಆಶಯ ಬೇರೆಯೇ ಆಗಿದ್ದರೂ ಮಹಿಳೆಯನ್ನು ಕುರಿತ ವಿಚಾರಗಳ ಬಗ್ಗೆ ಲೇಖಕಿಯು ವಿಶೇಷ ಒಲವು ತೋರಿರುವುದು ಇಲ್ಲಿ ಗೋಚರಿಸುತ್ತದೆ. ಸಮುದಾಯದ ಭಾಗವಾಗಿರುವ ಗಂಡು ಹೆಣ್ಣುಗಳಿಬ್ಬರು ಸಮಾನರಾಗಿದ್ದರೂ ಪರಪುರುಷನೊಂದಿಗಿನ ದೈಹಿಕ ಸಂಪರ್ಕದ ಕೃತ್ಯಕ್ಕಾಗಿ ಗಂಡನ್ನು ಗೌಣವಾಗಿಸಿ ಹೆಣ್ಣಿಗೆ ಮಾತ್ರ ಘೋರ ಶಿಕ್ಷೆ ವಿಧಿಸುವ ಪರಿಯನ್ನು ಲೇಖಕಿ ವಿವರಿಸಿದ್ದಾರೆ ಮತ್ತು ಈ ವಿಚಾರವಾಗಿ ತಮ್ಮ ನಿಲುವನ್ನು ನಾಗಮ್ಮ ಎಂಬ ಪಾತ್ರದ ಮೂಲಕ ಇನ್ನೂ ಗಟ್ಟಿಗೊಳಿಸಿದ್ದಾರೆ. ನಾಗಮ್ಮ ತನ್ನ ಸಂಸಾರದ ಹಿತವನ್ನೇ ಮುಖ್ಯವಾಗಿಸಿಕೊಂಡ

[2] ಅದೇ ಪುಟ.

DOI: 10.59176
http://www.kristujayantijournal.com/index.php/KJKSP

ಒಬ್ಬ ಸಾಮಾನ್ಯ ಹೆಣ್ಣಾದರೂ ಮತ್ತೊಂದು ಹೆಣ್ಣಿನ ಸಂಗತಿ ಬಂದಾಗ ಸಂಸಾರ, ಮಗ, ಮೊಮ್ಮಕ್ಕಳು ಎಂಬ ಸಂಬಂಧವನ್ನು ಪಕ್ಕಕ್ಕಿರಿಸುವುದನ್ನು ಕಾಣಬಹುದು. ಆಕೆ ತನ್ನ ಮಗನಾದ ಮಲ್ಲೇಶ ಪದ್ದಿಯೊಂದಿಗೆ ವಿವಾಹೇತರ ಸಂಬಂಧವಿರಿಸಿಕೊಂಡದ್ದು ತಿಳಿದ ಸಂದರ್ಭದಲ್ಲಿ ಹೇಳುವ

'ಮಲ್ಲೇಶು ರಾತ್ರಿ ನಿನ್ನ ಪಕ್ಕಕೆ ಬಂದಿದ್ದೋಳು ಯಾರೂಂತ ನನ್ಮ್ಯಾಲೆ ಆಣೆ ಮಾಡಿ ಹೇಳು?'[3]

'ನಾನು ನಿನ್ ಬೈಯಕ್ಕೆ ಕೇಳ್ತಿಲ್ಲ ಕಣೋ ಮಲ್ಲೇಶು. ನೀನು ಹೆಂಡ್ರಿಲ್ದೋನು. ನಿನ್ನಕಷ್ಟ ನಂಗೆ ತಿಳಿತದೆ. ಯಾರಾರ ಗಂಡ ಸತ್ತೋಳ್ಜತೆ ಮನಿಕೊಂಡು, ಅವ್ಳುನ್ನ ಬಸ್ರು ಮಾಡುದ್ರೆ, ಪಾಪಾ ಆ ಹುಡ್ಗಿ ಬಾಳು ಹಾಳಾಯ್ತುದಲ್ಲಾಂತ ಕೇಳ್ದೆ ಅಷ್ಟೇ? ಗಂಡ್ಸು ಏನ್ಮಾಡೂದ್ರು, ಸುದ್ಧ ಮಾಡುಸ್ಕೊಂಡು ವಳಿಕ್ಕೆ ಕರ್ಕೊಂಡು ಬುಡ್ತರೆ ಅಟ್ಟಿ ಜನ. ಅದೇ ಹೆಂಗ್ಸು! ಅವ್ಳನ ಕೆಟ್ಟಟ್ಟಿಗೆ ಬುಟ್ಬುಡ್ತರೆ. ಅದ್ಕೆ ಕೇಳ್ತಿರದು ಕಣಪ್ಪ'[4] ಎಂಬ ಅವಳ ಮಾತು ಮಹಿಳೆಯ ಕುರಿತಾದ ಅಂತಃಕರಣವನ್ನು ಬಿಂಬಿಸುತ್ತದೆ. ಅಂದರೆ ಗಂಡು ವಿಧುರನೇ ಆಗಿರಲಿ ಅಥವಾ ಹೆಂಡತಿ ಇರುವವನೇ ಆಗಿರಲಿ ತನ್ನ ದೈಹಿಕ ಕಾಮನೆಗಳನ್ನು ಮೀರಲಾಗದೇ ಮತ್ತೊಬ್ಬ ಹೆಣ್ಣಿನೊಂದಿಗೆ ಸಂಸರ್ಗವನ್ನು ಮಾಡುತ್ತಿರುವುದು ತಿಳಿದಾಗ ಆ ಹೆಣ್ಣನ್ನು ನಿಂದಿಸಿ ಅವಳನ್ನು ತಪ್ಪಿತಸ್ಥಳನ್ನಾಗಿಸಿ ಬಹಿಷ್ಕಾರ ಹಾಕಲಾಗುತ್ತದೆಯೇ ಹೊರತು ಗಂಡಿನ ಪಾಲೂ ಇದರಲ್ಲಿದೆ ಎಂದು ಯಾರೂ ಯೋಚಿಸುವುದಿಲ್ಲ. ಆದರೆ ಇಲ್ಲಿ ನಾಗಮ್ಮಳಾಡುವ ಮಾತು ಮಹಿಳೆಗೆ ಇನ್ನೊಬ್ಬ ಮಹಿಳೆಯನ್ನು ಕುರಿತು ಇರುವ ಕಾಳಜಿಯ ಜೊತೆಗೆ ಆ ಘಟನೆಯಿಂದ ಅವಳಷ್ಟೇ ಅಲ್ಲದೇ ಅವಳ ಕುಟುಂಬ ತಲೆಮಾರುಗಳ ನಂತರವೂ ಅದರಿಂದ ಅವಮಾನಿತವಾಗಿ ಬದುಕಬೇಕಾದ ಸ್ಥಿತಿಯನ್ನು ವಿವರಿಸುತ್ತದೆ. ಅವಳ ಈ ಕಾಳಜಿ ಹಾಗೂ ಅಂತಃಕರಣದ ಕಾರಣಕ್ಕಾಗಿ ನಾಗಮ್ಮ ಭಿನ್ನವಾಗಿ ನಿಲ್ಲುತ್ತಾಳೆ. ಈಕೆ ವಿದ್ಯಾವಂತೆಯಲ್ಲದಿದ್ದರೂ ನೈತಿಕ ಮಾರ್ಗವಾಗಿ ಯೋಚಿಸುವ ವ್ಯಕ್ತಿತ್ವವಾಗಿ ಕಂಡುಬರುತ್ತಾಳೆ. ಹೆಣ್ಣಿಗೆ ತಮ್ಮ ಸಮುದಾಯದಲ್ಲಿ ನಡೆಯುವ ಹಿಂಸಾತ್ಮಕ ನಡೆಯನ್ನು ಗಟ್ಟಿಧ್ವನಿಯಲ್ಲಿ ಅವಳಿಂದ ಪ್ರತಿಭಟಿಸಲು ಸಾಧ್ಯವಾಗದಿದ್ದರೂ ತನ್ನದೇ ಆದ ಸೌಮ್ಯ ರೀತಿಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮೂಲಕ ಭಿನ್ನವಾಗಿ ಆಕೆ ನಿಲ್ಲುತ್ತಾಳೆ.

ಮನುಷ್ಯನ ವ್ಯಕ್ತಿಗತ ಪ್ರಯತ್ನ ಹಾಗೂ ಸಮಯ ಪ್ರಜ್ಞೆಗೆ ಬದುಕನ್ನು ಬದಲಿಸುವ ಶಕ್ತಿ ಇರುತ್ತದೆ ಎಂಬುದನ್ನು ವಸುಮತಿ ಉಡುಪ ಅವರ 'ಮನ್ವಂತರ' ಕಾದಂಬರಿಯ 'ಕಾವೇರಿ' ಪಾತ್ರದ ಮೂಲಕ ಅರಿಯಬಹುದು. ಮಲೆನಾಡಿನ ಸ್ಥಿರ ಕುಟುಂಬವೊಂದರಿಂದ ಹೊರ ಬರುವ ಹೆಣ್ಣಿನ ಚಿತ್ರಣವನ್ನು ನೀಡುವ ಈ

[3] ಕೃಷ್ಣಮುದ್ರಿಕೆ, ಮಂಗಳ ಸಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2017, ಪುಟ ಸಂಖ್ಯೆ – 274
[4] ಕೃಷ್ಣಮುದ್ರಿಕೆ, ಮಂಗಳ ಸಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2017, ಪುಟ ಸಂಖ್ಯೆ – 274

ಕಾದಂಬರಿಯು ಸ್ವಾಭಿಮಾನ ಮತ್ತು ಸ್ವಾಯತ್ತ ಬದುಕಿಗಾಗಿ ಕಾವೇರಿಯಲ್ಲಿ ಉಂಟಾದ ಬದಲಾವಣೆಯ ಮೂಲಕ ಹಳ್ಳಿಗಾಡಿನ ದಿಟ್ಟ ಮಹಿಳೆಯನ್ನು ಕುರಿತು ವಿವರಿಸುತ್ತದೆ. ತಂದೆಯ ಮರಣದಿಂದಾಗಿ ತವರಿಗೆ ಬೆನ್ನೆಲುಬಾಗಿ ನಿಲ್ಲಲು ಮದುವೆಗೆ ಒಪ್ಪಿದ ಕಾವೇರಿಗೆ ಸಿಕ್ಕದ್ದು ಸುಳ್ಳುಗಾರ ಹಾಗೂ ಜವಾಬ್ದಾರಿಗೆ ತಲೆ ಬಾಗದ ಗಂಡ. ತಾನು ಬಯಸಿದ ರೀತಿಯಲ್ಲಿ ತನ್ನ ವೈವಾಹಿಕ ಜೀವನ ನಡೆಯದಿದ್ದರೂ ಗಂಡನ ವರ್ತನೆಯಲ್ಲಿ ಏನಾದರೂ ಬದಲಾವಣೆಯಾಗಬಹುದೆಂದು ಅಪೇಕ್ಷಿಸಿದ ಕಾವೇರಿಯ ನಿರೀಕ್ಷೆಗೆ ಸಮನಾಗಿ ಬದುಕು ನಡೆಯುವುದಿಲ್ಲ. ತವರುಮನೆಯ ಹಂಗಿನಿಂದ ದೂರವುಳಿದು ತನ್ನದೇ ಆದ ಸಂಸಾರವನ್ನು ಕಟ್ಟಬೇಕೆಂಬ ಕನಸಿದ್ದ ಕಾವೇರಿಯ ಆಸೆಗೆ ತಕ್ಕಂತೆ ಅವಳ ಗಂಡ ಸಹಕರಿಸದಿದ್ದಾಗ ಅವನನ್ನು ತ್ಯಜಿಸಿ ಕಾನೂನಾತ್ಮಕವಾಗಿ ಬರಬೇಕಾಗಿದ್ದ ಗಂಡನ ಪಾಲಿನ ಆಸ್ತಿಯನ್ನು ತೆಗೆದುಕೊಂಡು ತನ್ನ ಮಕ್ಕಳೊಂದಿಗೆ ಪ್ರತ್ಯೇಕ ಜೀವನವನ್ನು ಆರಂಭಿಸಿ ಬಡತನದಲ್ಲಿಯೂ ಯಾರ ಹಂಗಿಗೂ ಬೀಳದೆ ತನ್ನ ಹೊಸ ಬದುಕಿಗೆ ಮುನ್ನುಡಿ ಬರೆಯುತ್ತಾಳೆ. ತನ್ನ ಪಾಲಿಗೆ ಬಂದ ಭೂಮಿಯಲ್ಲಿ ವ್ಯವಸಾಯ ಮಾಡಿ ಅದರಿಂದ ಗಳಿಸಿದ ಹಣದಲ್ಲಿ ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಅವರು ಕೆಲಸಕ್ಕೆ ಸೇರಿ ತಮ್ಮ ಬಡತನವನ್ನು ಮೀರಲು ನೆರವಾಗುತ್ತಾಳೆ. ತಮ್ಮ ಸ್ವಾರ್ಥಕ್ಕಾಗಿ ನಮ್ಮನ್ನು ಹಾಗೂ ನನ್ನ ಮಕ್ಕಳನ್ನು ತಾಯಿ, ತಮ್ಮ, ಹಾಗೂ ಗಂಡ ಬಳಸಿಕೊಳ್ಳುತ್ತಿರುವುದನ್ನು ಅರಿತ ಕಾವೇರಿ ಧೈರ್ಯದಿಂದ ಸಮಯಕ್ಕೆ ಸರಿಯಾಗಿ ತೆಗೆದುಕೊಂಡ ನಿರ್ಧಾರ ಅವಳ ಬದುಕಿನ ಜೊತೆಗೆ ಅವಳ ಮಕ್ಕಳ ಬದುಕನ್ನು ಬದಲಿಸುತ್ತದೆ. ಅಂದರೆ ಕುಟುಂಬ ವ್ಯವಸ್ಥೆಯಲ್ಲಿ ಎರಡನೇ ದರ್ಜೆಯವಳಾಗಿ ಕಾಣಿಸಿಕೊಳ್ಳುತ್ತಿರುವ ಹೆಣ್ಣು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವ ಸಲುವಾಗಿ ಹಣಕಾಸಿನ ವಿಚಾರದಲ್ಲಿ ಸ್ಥಿರವಾಗಿಯೇ ಇದ್ದ ತವರನ್ನು ತೊರೆದು ಬಡತನದ ಪರಿಧಿಗೆ ಬರಬೇಕಾಗಿ ಬಂದರೂ ಅದಕ್ಕೆ ಹೆದರದೇ ಕೌಟುಂಬಿಕ ಪ್ರಜ್ಞೆಯಲ್ಲೇ ತನ್ನ ಸ್ವಾಭಿಮಾನದ ಬದುಕನ್ನು ಕಂಡುಕೊಳ್ಳುವ ಮೂಲಕ ಇಲ್ಲಿ ಭಿನ್ನವಾಗಿ ನಿಲ್ಲುತ್ತಾಳೆ.

ಇದೇ ಬಗೆಯ ಕಥಾಹಂದರವನ್ನೇ ಒಳಗೊಂಡಿರುವ ಮತ್ತೊಂದು ಕಾದಂಬರಿ ಗೀತಾ ನಾಗಭೂಷಣ ಅವರ 'ಸವಾಲು'. ಕಲ್ಬುರ್ಗಿ ಹಾಗೂ ಅಲ್ಲಿನ ಸುತ್ತಮುತ್ತಲ ಹಳ್ಳಿಯ ಪರಿಸರ, ಸರಳ ನಿರೂಪಣೆಯ ಜೊತೆಗೆ ಉತ್ತರ ಕರ್ನಾಟಕದ ಭಾಷೆ ಹಾಗೂ ಅಲ್ಲಿ ಜನರ ಬಗ್ಗೆ ಈ ಕೃತಿ ರಚನೆಯಾಗಿದ್ದು, 'ರತ್ನ' ಇದರ ಪ್ರಮುಖ ಪಾತ್ರವಾಗಿದ್ದಾಳೆ. ತನ್ನ ಬದುಕಿನ ಆರಂಭದ ಘಟ್ಟದಿಂದಲೂ ಅನಾಥಳಾಗಿ ಬೆಳೆದ ರತ್ನ, ತನ್ನ ಸೋದರಮಾವನ ಮನೆಯಲ್ಲಿ ಪರಕೀಯಳಾಗಿ ಬದುಕಿ ರವಿರಾಜನನ್ನು ವರಿಸಿದ ನಂತರ ನೆಮ್ಮದಿಯ ಬದುಕನ್ನು ಕಾಣುತ್ತಾಳೆ. ಆದರೆ ಅವಳ ಸುಖೀ ದಾಂಪತ್ಯವನ್ನು ಕಂಡು ಕರುಬಿದ ಅವಳ ತಂಗಿ ಗಿರಿಜಾ ತನ್ನ ಬಾವನನ್ನು ತನ್ನೆಡೆಗೆ ಸೆಳೆದುಕೊಂಡು ಮಗುವನ್ನು ಕಳೆದುಕೊಂಡು ಹಸಿ ಬಾಣಂತಿಯಾದ ರತ್ನಳನ್ನು ಮನೆಯಿಂದ ದೂಡುವಂತೆ ಮಾಡುತ್ತಾಳೆ. ಆ ಸಂದರ್ಭದಲ್ಲಿ ರವಿರಾಜ ಹೇಳುವ

'ನೀ ನನ್ನ ಹೆಣ್ತಿ ಅಂತ ಈಸು ದಿನ ನಿನಗ ಮನ್ಯಾಗಿರಕ ಜಾಗಾ ಕೊಟ್ಟೀನಿ, ಇಲ್ದರ ನೀ ಸಿದ್ಧಮತ್ತಿ ಜತಿ ಜಗಳ ಆಡ್ದಾಗೇ ನಿನಗ ಒದ್ದ ಮನಿಲಿಂದ ಓಡ್ಸಿ ಬಿಡ್ತಿದ್ನಿ, ನಿಂದು ಅಂತ ನಿನಗ ಏನು ಪೆಹಚಾನ ಆದ, ನಿನ್ನ ಗುರುತು, ಕೂನ ಯಾರಿಗ್ಯಾದ, ಎಲ್ಲೋರು ನಿನಗ ಗುರುತಿಸೋದು ನನ್ನ ಹೆಣ್ತಿ, ಅಂದ್ರ ರವಿರಾಜನ ಹೆಣ್ತಿ ಅಂತ, ನಿನಲಿಂದ ನನ್ನ ಹೆಸರು ಕಿತ್ಕೊಂಡ್ರ ನಿಂದೆನು ಅಸ್ತಿತ್ವ ಅದ, ಯಾವ ನಾಯಿನೂ ನಿನಗ ಕೇಳಂಗಿಲ್ಲ, ನಾ ಹಾಕಿದ್ದು ತಿಂದು ನಾಯಿ ಹಂಗ ನನ್ ಮನ್ಯಾಗ ಬೀಳಂಗಿದ್ರೆ ಬೀಳು. ಇಲ್ಲಂದ್ರ ಈಗಿಂದೀಗ ನನ್ ಮನಿಲಿಂದ ಹೋಗು ಹೊರಗ'[5] ಎಂಬ ಮಾತಿಗೆ 'ಇನ್ನ ಮುಂದೆ ನನಗ ನಿನ್ನ ಹೆಸರಿನ ಹಂಗೇ ಬ್ಯಾಡ! ನಿನ್ನ ಹೆಸರಿನ ಆಸರಿಲಿಂದ ಮಂದಿ ನನಗ ಕೂನ, ಗುರ್ತಾ ಹಿಡ್ಯಾದೂ ಬ್ಯಾಡ... ನಿನ್ ಹೆಸರಿನ ಭಿಡ್ಯಾ ಇಲ್ದೆ ನಾ ಬದುಕ್ತೀನಿ, ನಂದೇ ಒಂದು ನನ್ನತನ; ಒಂದು ಪೆಹಚಾನ್ ಮಾಡ್ಕೋತಿನಿ, ಬರೀ ರತ್ನ ಆಗೇ ನಾನು ಸ್ವಾಭಿಮಾನದಿಂದ ಈ ದುನಿಯಾದಾಗ ಬಾಳ್ಯಾ ಮಾಡಿ ತೋರಸ್ತೀನಿ'[6] ಎಂದ ರತ್ನ ತನ್ನ ಅಸ್ಮಿತೆಯ ಹುಡುಕಾಟಕ್ಕೆ ತೊಡಗುತ್ತಾಳೆ. ಈ ಹುಡುಕಾಟದಲ್ಲಿ ಹಲವು ನೋವು ಹಾಗೂ ಸವಾಲುಗಳನ್ನು ಅನುಭವಿಸಿದರೂ ಅವುಗಳನ್ನೆಲ್ಲಾ ಎದುರಿಸಿ 'ರೊಟ್ಟಿ ಮನೆ'ಯನ್ನು ಆರಂಭಿಸಿ ಹಲವು ಕುಟುಂಬಗಳಿಗೂ ನೆರವಾಗುತ್ತಾಳೆ. ಅಲ್ಲದೆ ನಂತರದ ದಿನಗಳಲ್ಲಿ ಹರಾಜಿಗೆ ಬಂದು ನಿಂತ ತನ್ನ ಗಂಡನಾದ ರವಿರಾಜನ ಮನೆಯನ್ನು ತಾನೇ ಕೊಂಡುಕೊಂಡು ಅವನಿಗೆ ಅದನ್ನು ಮರಳಿಸುತ್ತಾಳೆ. ಆಗ 'ಆಯ್ತು ನೀ ಇನ್ನ ಹೊಂಟು ಹೋಗು ರವೀ, ಈಗ ನಾವಿಬ್ಬರೂ ಅಪರಿಚಿತರು ಆಟೇ, ಮತ್ತೆ ನನಗ ಬೇಟಿಯಾಗೋದಾಗಲಿ, ಮಾತಾಡೋ ಪ್ರಯತ್ನ ಮಾಡಬ್ಯಾಡ, ನಮ್ಮ ದಾರಿ ಎಂದೋ ಕವಲೊಡೆದಾವ. ನಮಸ್ಕಾರ'[7] ಎಂದು ಹೇಳುವಾಗಿನ ಅವಳ ದಿಟ್ಟತನದಲ್ಲಿ ಅವಳ ಹಿಂದಿನ ಬದುಕಿಗೆ ಗಂಡ ಅವಮಾನವನ್ನು ಮಾಡಿದ್ದರೂ ಅದಕ್ಕೆ ಪ್ರತಿಯಾಗಿ ಅವನಿಗೆ ತನ್ನ ದುಡಿಮೆಯ ಹಣದಿಂದಲೇ ಮತ್ತೆ ಅವನ ಬದುಕನ್ನು ಕಟ್ಟಿಕೊಡುವುದರ ಜೊತೆಗೆ ಮತ್ತೆ ಅವನ ಸಾಂಗತ್ಯವನ್ನು ಬಯಸದೇ ಒಂಟಿಯಾಗಿಯೇ ಉಳಿದು ಬದುಕನ್ನು ಎದುರಿಸುವ ಸ್ವಾಭಿಮಾನದ ಹೆಣ್ಣಾಗಿ ಕಾಣಿಸುತ್ತಾಳೆ.

ಇಲ್ಲಿ ವಿಶ್ಲೇಷಿಸಿರುವ ಹೆಣ್ಣುಗಳ ಮೂಲಧಾತು ಒಂದೇ ಬದುಕುವ ಹಂಬಲ. ಸಾಮಾಜಿಕ ವ್ಯವಸ್ಥೆಯನ್ನು ಎದುರು ಹಾಕಿಕೊಂಡು ತನ್ನ ಬದುಕನ್ನು ಪಡೆದುಕೊಂಡ ದಾಕ್ಷಾಯಣಿ, ತಮ್ಮ ಜನಾಂಗದಲ್ಲಿ ಹೆಣ್ಣಿಗೆ ನೀಡುವ ಶಿಕ್ಷೆಯನ್ನು ನೆನೆದು ಅದರಿಂದ ಮತ್ತೊಂದು ಹೆಣ್ಣನ್ನು ತನ್ನ ಅಂತಃಕರಣದ ಮೂಲಕ ಕಾಪಾಡಲು ಯತ್ನಿಸುವ ನಾಗಮ್ಮ, ಸ್ವಾಭಿಮಾನದಿಂದ ತನ್ನ ಸಂಸಾರವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಬದುಕನ್ನು ಪಡೆದುಕೊಳ್ಳಲು

---

[5] ಸವಾಲು, ಗೀತಾ ನಾಗಭೂಷಣ, ಸಪ್ನ ಬುಕ್ ಹೌಸ್, ಬೆಂಗಳೂರು, 2019, ಪುಟ ಸಂಖ್ಯೆ – 156

[6] ಸವಾಲು, ಗೀತಾ ನಾಗಭೂಷಣ, ಸಪ್ನ ಬುಕ್ ಹೌಸ್, ಬೆಂಗಳೂರು, 2019, ಪುಟ ಸಂಖ್ಯೆ – 157

[7] ಅದೇ ಪುಸ್ತಕ, ಪುಟ ಸಂಖ್ಯೆ – 355

ಬಡತನ ಮತ್ತು ಅವಮಾನವನ್ನು ಯಾವ ಅಂಜಿಕೆಯೂ ಇಲ್ಲದೆ ಎದುರಿಸಿ ಮಕ್ಕಳ ಅಭ್ಯುದಯಕ್ಕೆ ಕಾರಣಳಾದ ಕಾವೇರಿ, ಗಂಡ ಮಾಡಿದ ಅವಮಾನದಿಂದ ಜರ್ಜರಿತಳಾಗಿ ಮಾನಸಿಕವಾಗಿ ಕುಗ್ಗಿದಾಗ ಆ ವಿಷವ್ಯೂಹದಿಂದ ಹೊರ ಬಂದು ತನ್ನ ಅಸ್ತಿತ್ವವನ್ನು ತಾನೇ ಕಂಡುಕೊಂಡು  ಸಿಕ್ಕ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಗೆದ್ದು ನಿಂತ ರತ್ನ ಇಲ್ಲಿ ಚರ್ಚೆಯ ವಿಷಯವಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಫಣಿಯಮ್ಮ, ಎಂ ಕೆ ಇಂದಿರಾ, ಇಂದಿರಾ ಪ್ರಕಾಶನ, ಬೆಂಗಳೂರು, 2013
2. ಕೃಷ್ಣಮುದ್ರಿಕೆ, ಮಂಗಳ ಸಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2017
3. ಮನ್ವಂತರ, ವಸುಮತಿ ಉಡುಪ, ಅಂಕಿತ ಪುಸ್ತಕ, ಬೆಂಗಳೂರು, 2015
4. ಸವಾಲು, ಗೀತಾ ನಾಗಭೂಷಣ, ಸಪ್ನ ಬುಕ್ ಹೌಸ್, ಬೆಂಗಳೂರು, 2019